**ಶ್ರೀಮತಿ ಸಂಧ್ಯಾ ಎಸ್. ಪೈ**

ವಿಳಾಸ: ವ್ಯವಸ್ಥಾಪಕ ಸಂಪಾದಕರು
**ತರಂಗ ಸಾಪ್ತಾಹಿಕ, ಮಣಿಪಾಲ 576 104**

ಮಣಿಪಾಲ ಮೀಡಿಯಾ ನೆಟ್‌ವರ್ಕ್ ಲಿಮಿಟೆಡ್ ಎಂಬುದು ಭಾರತದಲ್ಲಿ ಮುದ್ರಣ ಮಾಧ್ಯಮದ ಉತ್ತುಂಗ ಹೆಸರುಗಳಲ್ಲೊಂದು. ಮುದ್ರಣ ಮಾಧ್ಯಮದ ಅನಭಿಷಕ್ತ ಅಧ್ವರ್ಯುವೆನಿಸಿದ ಮಣಿಪಾಲ ಮೀಡಿಯಾ ನೆಟ್‌ವರ್ಕ್ ಲಿ. ಪತ್ರಿಕಾ ಸಮೂಹದ ಮನೆ ಮನೆ ಮಾತಾಗಿರುವ ಪ್ರತಿಷ್ಠಿತ ಕನ್ನಡ ಪತ್ರಿಕೆಗಳಾದ **ತರಂಗ** ಸಾಪ್ತಾಹಿಕ, **ತುಷಾರ** ಸಾಹಿತ್ಯ ಮಾಸಿಕ, **ರೂಪತಾರಾ** ಸಿನಿ ಮಾಸಿಕ, **ಉದಯವಾಣಿ** ದೈನಿಕದ ಸಾಮಾಜಿಕ - ಸಾಂಸ್ಕೃತಿಕ ಸದಭಿರುಚಿಯ ವಿಶೇಷ ಸಂಪದಗಳು ಹಾಗೂ **ತುಂತುರು** ಮಕ್ಕಳ ಪಾಕ್ಷಿಕ ಮಾಸ ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕರಾಗಿ ಪತ್ರಿಕಾ ಕ್ಷೇತ್ರ ಪ್ರವೇಶಿಸಿದ ಅಲ್ಪ ಕಾಲದಲ್ಲೇ ದಕ್ಷತೆ, ಕ್ರಿಯಾಶೀಲ ಪ್ರತಿಭೆ, ಆಡಳಿತ ಕೌಶಲ್ಯ, ಕಾರ್ಯ ಸಾಮರ್ಥ್ಯಗಳಿಂದ ತನ್ನ ಪ್ರಬುದ್ಧತೆಯನ್ನು ಒರೆಗಿಟ್ಟು ಜನಮನ ಗೆದ್ದವರು ಶ್ರೀಮತಿ ಸಂಧ್ಯಾ ಪೈ. ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ, ಕೌಶಲ್ಯಾತ್ಮಕ - ಹೀಗೆ ರಚನಾತ್ಮಕವಾಗಿ ಪ್ರತೀ ಪತ್ರಿಕೆಗೂ ಹೊಸ ಆಯಾಮ ಕೊಡಲು ಸತತ ಪರಿಶ್ರಮ ಪಡುತ್ತಿರುವ ಶ್ರೀಮತಿ ಸಂಧ್ಯಾ ಪೈ ಅವರಿಗೆ ಮಾಡುವುದನ್ನು ಚೆನ್ನಾಗಿಯೇ ಮಾಡಬೇಕೆಂಬ ಉತ್ಸಾಹವಿದೆ. ಛಲವಿದೆ. ಆತ್ಮವಿಶ್ವಾಸವಿದೆ. ಒಂದೇ ಸೂರಿನಡಿಯಲ್ಲಿ ಪ್ರಕಾಶನಗೊಳ್ಳುತ್ತಿರುವ ಮಣಿಪಾಲ ಸಮೂಹದ ಈ ಪತ್ರಿಕೆಗಳು ಸೂತ್ರ ಕಡಿದುಕೊಳ್ಳದೇ ಸುಸೂತ್ರವಾಗಿ ಮುಂದುವರಿಯುವಂತಾಗಲು ಈ ಪತ್ರಿಕೆಗಳ ಸೂತ್ರವನ್ನು ಒಂದು ಹಂತದಲ್ಲಿ ಕೈಗೆತ್ತಿಕೊಂಡ ಅವರು ಇದೀಗ ಯಶಸ್ವೀ ಸಂಪಾದಕಿಯಾಗಿ ಜನಪ್ರಿಯರಾಗಿರುವುದಕ್ಕೆ ಕಾರಣ ಇದೇ ಛಲ, ಇದೇ ಆತ್ಮ ವಿಶ್ವಾಸ. ಕಷ್ಟ-ಸುಖ, ನೋವು-ನಲಿವುಗಳನ್ನು ಮಾನವೀಯ ದೃಷ್ಟಿಯಿಂದ ವಿವೇಚಿಸಿ, ಸಮಸ್ಯೆಗಳನ್ನು ಎದೆಗುಂದದೆ ಸವಾಲಾಗಿ ಸ್ವೀಕರಿಸಿ, ಕಠಿಣ ಸಂದರ್ಭಗಳಲ್ಲಿ ವಜ್ರದಂತೆ ಕಠೋರವಾಗಿ, ಉಳಿದ ವೇಳೆ ಕುಸುಮದಷ್ಟೇ ಮೃದುವಾಗಿ, ಜಿಗುಟು - ಕಗ್ಗಂಟುಗಳನ್ನು ಸುಲಲಿತವಾಗಿ ಸೌಹಾರ್ದದಿಂದ ಬಗೆಹರಿಸುತ್ತಿರುವ ಶ್ರೀಮತಿ ಸಂಧ್ಯಾ ಪೈ ಅವರ ದೃಷ್ಟಿಕೋನ , ಮಾತ್ರ ಅಂತ:ಕರಣದ ಒಳತೋಟಿ ಕಡ್ಡಿ ಮುರಿದಷ್ಟೇ ನೇರ ಅಷ್ಟೇ ವಾತ್ಸಲ್ಯಪೂರ್ಣ. ವೇದಾಂತ, ಉಪನಿಷತ್, ಭಗವದ್ಗೀತೆ, ಯೋಗ, ತಂತ್ರ, ಝೆನ್........ ಹೀಗೆ ಎಲ್ಲದರ ಉತ್ತಮ ವಿಚಾರಗಳನ್ನು ಸಮನ್ವಯಗೊಳಿಸಿ ಇಂದಿನ ಬದುಕಿಗೆ ಪ್ರಸ್ತುತವಾದ ಆಧ್ಯಾತ್ಮ - ಆಧುನಿಕ ಆರೋಗ್ಯಪೂರ್ಣ ಚಿಂತನೆಗಳನ್ನು ಪ್ರಿಯ ಓದುಗರೇ ಎಂಬ ತನ್ನ ಸಂಪಾದಕೀಯದಲ್ಲಿ *ತರಂಗ* ಓದುಗರಿಗೆ ತಲಪಿಸುತ್ತಿರುವ ಶ್ರೀಮತಿ ಸಂಧ್ಯಾ ಪೈ ಅವರದು ಸುದೀರ್ಘ ಅಧ್ಯಯನ, ವ್ಯಾಪಕ ಓದು, ವಿಶಾಲ ಜ್ಞಾನ. ಮಣಿಪಾಲ ಎಂಟರ್‌ಟೈನ್‌ಮೆಂಟ್ ಮೀಡಿಯಾ ನೆಟ್‌ವರ್ಕ್ , ಶ್ರೀಮತಿ ಸಂಧ್ಯಾ ಪೈ ಅವರ ನನಸಾದ ಕನಸಿನ ಕೂಸು . ವಿದ್ಯುನ್ಮಾನ ಕ್ಷೇತ್ರದಲ್ಲಿ ಊರಿದ ಮೊದಲ ಹೆಜ್ಜೆಯಲ್ಲೇ ತನ್ನ ಪ್ರಭಾವದ ಸತ್ವ ಏನೆಂದು ಬಿಂಬಿಸಿದವರು ಶ್ರೀಮತಿ ಸಂಧ್ಯಾ ಪೈ. 'ಬಿದಿಗೆ ಚಂದ್ರಮ' ಮತ್ತು ಈಗ ಪ್ರಸಾರವಾಗುತ್ತಿರುವ ಕರ್ನಾಟಕಾದ್ಯಂತ ಮನೆ ಮಾತಾಗಿರುವ ' ಗುಪ್ತಗಾಮಿನಿ '- ಇವೆರಡರ ಬಗಲಿಗೆ ಪ್ರತಿಷ್ಠಿತ ' ಆರ್ಯಭಟ ' , ಸಾಂಸ್ಕೃತಿಕ ಸಂಘಟನೆಯ ಎಂಟು ಪ್ರಶಸ್ತಿಗಳು ಬಂದಿವೆ. ಶ್ರೀಮತಿ ಸಂಧ್ಯಾ ಪೈ ಅವರು ನಿರ್ಮಾಪಕರಾಗಿರುವ ' ಯಾವ ಜನ್ಮದ ಮೈತ್ರಿ ' ಟೆಲಿ ಸೀರಿಯಲ್‌ಗೆ ನಿರ್ಮಾಣವೂ ಸೇರಿದಂತೆ 2005ನೇ ಸಾಲಿನ ಒಟ್ಟು ಐದು 'ಆರ್ಯಭಟ' ಪ್ರಶಸ್ತಿಗಳು ಲಭ್ಯವಾಗಿವೆ. ಪತ್ರಿಕೋದ್ಯಮದಲ್ಲಿ ಅವರ ಮಹತ್ತರ ಸಾಧನೆಯನ್ನು ಗುರುತಿಸಿ , ಸಂದಿರುವ ಪ್ರತಿಷ್ಠಿತ ' ಅತ್ತಿಮಬ್ಬೆ ' ಪ್ರಶಸ್ತಿ ಅವರ ಜವಾಬ್ದಾರಿಯುತ ಕಾರ್ಯಕ್ಕೆ ಸಂದ ಗೌರವ. ಈ ಕ್ಷೇತ್ರದಲ್ಲಿ ಮಹಿಳೆಯೊಬ್ಬರು ಪಡೆಯುತ್ತಿರುವ ಇದು ಮೊದಲ ಪ್ರಶಸ್ತಿಯೂ ಹೌದು . ' ತರಂಗ ' ವನ್ನು ಕನ್ನಡದ ಅಗ್ರಗಣ್ಯ ವಾರಪತ್ರಿಕೆಯಾಗಿ ರೂಪಿಸಿರುವುದಕ್ಕಾಗಿ 'ಪಬ್ಲಿಕ್ ರಿಲೇಶನ್ ಸೊಸೈಟಿ ಆಫ್ ಇಂಡಿಯಾ'ದ ಮಂಗಳೂರು - ಮಣಿಪಾಲ ಘಟಕ , 2003ರ ಅತ್ಯುತ್ತಮ 'ಸಾರ್ವಜನಿಕ ಸಂಪರ್ಕ ವ್ಯಕ್ತಿ ಪ್ರಶಸ್ತಿ'ಯನ್ನು 2004ರಲ್ಲಿ ನೀಡಿ ಪುರಸ್ಕರಿಸಿದೆ. ಪ್ರತಿಷ್ಠೆಯ ಈ ಪ್ರಶಸ್ತಿ ಪಡೆದ 'ಪ್ರಥಮ ಮಹಿಳೆ' ಶ್ರೀಮತಿ ಸಂಧ್ಯಾ ಪೈ ಅವರು. ಭಾರತೀಯ ಧರ್ಮ , ಸಂಸ್ಕೃತಿ, ಸಾಹಿತ್ಯ , ಪತ್ರಿಕೋದ್ಯಮ , ಧರ್ಮ ಪರಂಪರೆಯ ಸಂರಕ್ಷಣೆ ಸಂವರ್ಧನೆಗಾಗಿ ಅವರು ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು 2005 ರಲ್ಲಿ 'ಸಾಧನಾ ಪ್ರಶಸ್ತಿ' ನೀಡಿ ಗೌರವಿಸಿದ್ದಾರೆ. ಪತ್ರಿಕಾ ಕ್ಷೇತ್ರದಲ್ಲಿ ಶ್ರೀಮತಿ ಸಂಧ್ಯಾ ಪೈ ಅವರ ಅಪ್ರತಿಮ ಸಾಧನೆ ಗುರುತಿಸಿ ಹೊಸನಗರ ತಾಲೂಕಿನ ಶ್ರೀ ರಾಮಚಂದ್ರಾಪುರ ಮಠವು ಅವರಿಗೆ 2007ರ 'ಶ್ರೀಮಾತಾ ಪ್ರಶಸ್ತಿ' ಪುರಸ್ಕಾರ ನೀಡಿದೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ ನೀಡುವ 2006ನೆಯ ಸಾಲಿನ ಕರ್ನಾಟಕ ಮಾಧ್ಯಮ ಅಕಾಡೆಮಿ ವಾರ್ಷಿಕ ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ.

ಡಡಡಡಡ